## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## Crl Misc. ಸಂಖ್ಯೆಃ 157 /2024

**ಸಾಕ್ಷಿಯನ್ನು ದಿಃ 17.01.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | |
|---|---|---|
| ಹೆಸರು | ಸುಪ್ರಿಯಾ | ಆರ್ ಡಬ್ಲ್ಯೂಃ 1 |
| ಗಂಡನ ಹೆಸರು | ಪರಮೇಶ್ವರ | |
| ವಯಸ್ಸು | 30 ವರ್ಷ | |
| ಕೆಲಸ | ವಿದ್ಯಾರ್ಥಿನಿ. | |
| ವಾಸಸ್ಥಳ | ಹುಣಸೂರು | |

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.RKR ವಕೀಲರಿಂದಃ**

2 ಮತ್ತು 3ನೇ ಅರ್ಜಿದಾರರು ನನ್ನ ಮಕ್ಕಳು. ಅವರಿಗೆ ಈಗ 10 ವರ್ಷ ಮತ್ತು 6 ವರ್ಷ ವಯಸ್ಸು. ಎದುರುದಾರರು ನನ್ನ ಗಂಡನಾಗಿದ್ದು, ನನ್ನ ಮತ್ತು ಅವರ ಮದುವೆ ದಿಃ 10.11.2013 ರಂದು ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನದಲ್ಲಿ ಆಗಿದೆ. ಮದುವೆಯ ಸಮಯದಲ್ಲಿ ನನ್ನ ತವರು ಮನೆಯಿಂದ ಎದುರುದಾರರಿಗೆ 100ಗ್ರಾಂ ನಷ್ಟು ಚಿನ್ನ ಕೊಟ್ಟು ಮದುವೆಯ ಖರ್ಚನ್ನುನನ್ನ ತವರು ಮನೆಯವರೇ ನೋಡಿಕೊಂಡಿದ್ದಾರೆ. ಎದುರುದಾರರು ಕೇಬಲ್ ವ್ಯವಹಾರ ಪ್ರಾರಂಭಿಸುತ್ತೇನೆ ಎಂದು ಹೇಳಿದಾಗ ನನ್ನ ತವರು ಮನೆಯವರು ಎದುರುದಾರರಿಗೆ ಹಣಕಾಸಿನ ಸಹಾಯ ಮಾಡಿದ್ದಾರೆ. ನಂತರ ಎದುರುದಾರರು ನನ್ನ ತವರು ಮನೆಯವರು ನಮ್ಮ ಮನೆಗೆ ಬರಬಾರದು ಎಂದು ವಿರೋಧ ವ್ಯಕ್ತಿ ಪಡಿಸಲು ಪ್ರಾರಂಭಿಸಿದರು. ಎದುರುದಾರರು ಕುಡಿದು ಬಂದು ಬಹಳ ಹಿಂಸೆ ಕೊಡುತ್ತಿದ್ದರು. ಎದುರುದಾರರ ಕುಟುಂಬದವರನ್ನು ಕೂರಿಸಿ ಮಾತನಾಡಿದರೂ ಸಹ ಸಮಸ್ಯೆ ಬಗೆಹರಿಯಲಿಲ್ಲ. ನಂತರ ನಾನು ಮಕ್ಕಳ ಸಮೇತ ನನ್ನ ತವರು ಮನೆಗೆ ಹೋಗಿ ವಾಸ ಮಾಡಲು ಪ್ರಾರಂಭಿಸಿದೆ. ಮಕ್ಕಳ ಶಾಲೆಯ ಪೀಜನ್ನು ಕೊಡುವಂತೆ ಕೇಳಿದರೂ ಕೂಡ ಎದುರುದಾರರು ವ್ಯವಸ್ಥೆ ಮಾಡಲಿಲ್ಲ. ಈಗ ನಾನು ಮಕ್ಕಳೊಂದಿಗೆ ಕಳೆದ 10 ತಿಂಗಳಿಂದ ಬಾಡಿಗೆ ಮನೆಯಲ್ಲಿದ್ದೇನೆ. ಅದಕ್ಕೂ ಮೊದಲು ತವರು ಮನೆಯಲ್ಲಿದ್ದೆ. ಕಳೆದ 10 ತಿಂಗಳಿಂದ ಬಾಡಿಗೆ ಕಟ್ಟಿಲ್ಲ. ಮಕ್ಕಳ ವಿದ್ಯಾಭ್ಯಾಸಕ್ಕೆ, ನನ್ನ ವಿದ್ಯಾಭ್ಯಾಸಕ್ಕೆ ಮತ್ತು ಬಾಡಿಗೆಗೆ ಸಾಲ ಮಾಡಿದ್ದೇನೆ.

(**ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು**, **ಕೋರಿಕೆ ಮೇರೆಗೆ ಮುಂದೂಡಲಾಯಿತು**.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ. ಎಂ. ಎಫ್. ಸಿ., ಹುಣಸೂರು.